# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಗುಡಿಬಂಡೆ

ಸಿ.ಸಿ. ಸಂಖ್ಯೆಃ 444/2019

ಸಿ ಡಬ್ಲ್ಯೂಃ 1 ಪಿ ಡಬ್ಲ್ಯೂಃ 1

| | | |
|---|---|---|
| ಸಾಕ್ಷಿದಾರರ ಹೆಸರು | :: | ಹರಿ ಪ್ರಸಾದ್ ಸಿ ಎನ್ |
| ತಂದೆ ಹೆಸರು | :: | ನಾರಾಯಣಸ್ವಾಮಿ |
| ವಯಸ್ಸು | :: | 23 ವರ್ಷ |
| ಉದ್ಯೋಗ | :: | ವಿದ್ಯಾರ್ಥಿ |
| ವಾಸ ಸ್ಥಳ | :: | ಚಿಕ್ಕಬಳ್ಳಾಪುರ |

ದಿನಾಂಕಃ 12-03-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋಧಿಸಲಾಯಿತು.

*ಮುಖ್ಯ ವಿಚಾರಣೆಃ ಮಾನ್ಯ ಪ್ರ. ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ*

ಚಾಸಾ -2 ರಿಂದ 11 ಹಾಗೂ ಆರೋಪಿ ನನಗೆ ಗೊತ್ತು .

ಮಂಡಿಕಲ್ಲು ಗ್ರಾಮದ ಸರ್ವೇ ನಂಬರ್ 32 ಒಂದನೇ ಆರೋಪಿಯ ತಂದೆ ಹೆಸರಿನಲ್ಲಿದ್ದು ನನ್ನ ತಂದೆ ನಾರಾಯಣಸ್ವಾಮಿ ರವರು 1 ನೇ ಆರೋಪಿಯ ಹೆಂಡತಿಯಾದ ದೇವಿ ರವರ ವಿರುದ್ಧ ಇದೇ ನ್ಯಾಯಾಲಯದಲ್ಲಿ ಸಿವಿಲ್ ದಾವೆಯನ್ನು ದಾಖಲು ಮಾಡಿದ್ದು ದಿನಾಂಕ 28-05-2019 ರಂದು ಸಂಜೆಃ 04- 50 ಗಂಟೆ ಸಮಯದಲ್ಲಿ 1 ಮತ್ತು 2 ನೇ ಆರೋಪಿತರು ಸದರಿ ಜಮೀನಿನಲ್ಲಿದ್ದ ಮರಗಳನ್ನು ಕಡಿಯುತ್ತಿದ್ದು ಆ ಬಗ್ಗೆ ಅರಣ್ಯ ಇಲಾಖೆಗೆ ತಿಳಿಸಿ ನಾನು ಮತ್ತು ನನ್ನ ತಂದೆ ಜಮೀನಿನ ಬಳಿ ಹೋಗಿ ಮರಗಳನ್ನು ಕಡಿಯಬಾರದು ಎಂದು 1 ಮತ್ತು 2 ನೇ ಆರೋಪಿತರಿಗೆ ನಾನು, ನನ್ನ ತಂದೆ ಅರಣ್ಯ ಇಲಾಖೆಯವರು ತಿಳಿಸಿದಾಗ 1 ನೇ ಆರೋಪಿಯು ಮಚ್ಚಿನಿಂದ ನನ್ನ ಎಡ ಕೈ ನ ರೆಟ್ಟೆಗೆ ಹೊಡೆದಿರುತ್ತಾರೆ. ನಂತರ 1 ಮತ್ತು 2 ನೇ ಆರೋಪಿತರು ಕೋಲು ಮತ್ತು ಕಲ್ಲುಗಳಿಂದ ನನ್ನ ತಲೆ, ಬೆನ್ನು ಮತ್ತು ಕಾಲು ಕೈ ಗಳಿಗೆ ಹೊಡೆದಿದ್ದು ನಾನು ತಪ್ಪಿಸಿಕೊಂಡು ಊರಿನೊಳಗೆ ಓಡಿ ಹೋಗಿದ್ದು ಆಗ 3 ನೇ ಆರೋಪಿಯು ನನ್ನನ್ನು ಹೊಡೆಯಲು ಬಂದಿದ್ದು 1 ನೇ ಆರೋಪಿಯು ಕೋಲನ್ನು ನನ್ನ ಕಡೆ ಬೀಸಿದ್ದು ಅದು ತಪ್ಪಿ 3 ನೇ ಆರೋಪಿಗೆ ತಗುಲಿರುತ್ತದೆ. ಆಗ 1, 3,4 ಮತ್ತು 5 ನೇ ಆರೋಪಿತರು ಕಲ್ಲುಗಳು ಮತ್ತು ಕೋಲುಗಳಿಂದ ನನ್ನ ಮೈ ಕೈಗೆ ಮತ್ತು ತಲೆಗೆ ಹೊಡೆದು ಅವಾಚ್ಯ ಶಬ್ದಗಳಿಂದ

ನಿಂದಿಸಿರುತ್ತಾರೆ ನಂತರ ನಾನು ಸ್ವಲ್ಪ ಮುಂದೆ ಹೋಗಿದ್ದು ನನ್ನ ಜೊತೆ  ಮರಗಳನ್ನು ತೆಗೆದುಕೊಂಡು ಹೋಗಲು ಬಂದಿದ್ದ ಚಾಸಾ -2 ರಿಂದ 7,9 ರಿಂದ 11 ರವರು ನನ್ನನ್ನು ಆರೋಪಿಗಳಿಂದ ಬಿಡಿಸಿರುತ್ತಾರೆ. ನಂತರ ಪೋಲೀಸರು ಬಂದು ನನ್ನನ್ನು ಗುಡಿಬಂಡೆ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆಗಾಗಿ ದಾಖಲು ಮಾಡಿರುತ್ತಾರೆ. ದಿನಾಂಕ 29-05-2019 ರಂದು ನಾನು ಆರೋಪಿತರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಪೋಲೀಸ್ ಠಾಣೆಗೆ  ಹೋಗಿ ದೂರು ನೀಡಿರುತ್ತೇನೆ.

ದಿನಾಂಕ 09-05-2019 ರಂದು ಗುಡಿಬಂಡೆ ಪೋಲೀಸರು ಕೃತ್ಯ ಸ್ಥಳಕ್ಕೆ ಬಂದಿದ್ದು ಆಗ ಸ್ಥಳದಲ್ಲಿ ನಾನು ಹಾಜರಿದ್ದು ಕೃತ್ಯ ಸ್ಥಳದಲ್ಲಿದ್ದ ಮಚ್ಚು ಕಲ್ಲು ಹಾಗೂ ದೊಣ್ಣೆಗಳನ್ನು ಅಮಾನತ್ತು ಪಡಿಸಿಕೊಂಡು ನನ್ನ ಸಮಕ್ಷಮ  ಮಹಜರ್ ಕ್ರಮ  ಜರುಗಿಸಿರುತ್ತಾರೆ

ಸಾಕ್ಷಿಯು ದೂರಿನಲ್ಲಿ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗ  ದೂರನ್ನು ನಿಪಿ 1 ಎಂದು , ಸಾಕ್ಷಿಯ  ಸಹಿಯನ್ನು ನಿಪಿ 1 (ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ಮಹಜರ್ ನಲ್ಲಿ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗ ದೂರನ್ನು ನಿಪಿ -2 ಎಂದು , ಸಾಕ್ಷಿಯ  ಸಹಿಯನ್ನು ನಿಪಿ-2 (ಎ) ಎಂದು ಗುರುತಿಸಲಾಯಿತು.

ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ .

( 1 ನೇ ಆರೋಪಿ ಹಾಜರಿದ್ದು,  2 ರಿಂದ  5 ನೇ  ಆರೋಪಿತರು ಗೈರು ಹಾಜರಿದ್ದು ಆರೋಪಿ ಪರ ವಕೀಲರು ವಿನಾಯತಿ ಅರ್ಜಿಯನ್ನು ಸಲ್ಲಿಸಿದ್ದು ಆರೋಪಿತರನ್ನು ಗುರುತಿಸುವಿಕೆಯಲ್ಲಿ ಯಾವುದೇ ತಕರಾರು ಇರುವುದಿಲ್ಲ ಎಂದು ತಿಳಿಸಿರುತ್ತಾರೆ .)

(ಈ ಹಂತದಲ್ಲಿ ಮಾನ್ಯ ಪ್ರ. ಸ.ಸ.ಅ. ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅವಕಾಶವನ್ನು ಕೋರಿರುತ್ತಾರೆ. ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷ್ಯ ಎಂದು ಪರಿಗಣಿಸಿ ಮಾನ್ಯ ಸ.ಸ.ಅ. ರವರಿಗೆ ಪಾಟೀ ಸವಾಲು ಮಾಡಲು ಅನುಮತಿಯನ್ನು ನೀಡಲಾಯಿತು.)

*ಪಾಟೀ ಸವಾಲುಃ ಮಾನ್ಯ ಪ್ರ. ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃಃ*

1 ನೇ ಆರೋಪಿಯು ಸರ್ವೇ ನಂಬರ್ 32 ರಲ್ಲಿ ಮರಗಳನ್ನು ಕಡಿದಿದ್ದು ಆ ಬಗ್ಗೆ ಅರಣ್ಯ ಇಲಾಖೆಯಲ್ಲಿ ದೂರನ್ನು ನೀಡಿದ್ದು ದೂರನ್ನು ದಾಖಲಿಸಲು ಮರಳನ್ನು ಅವರ ಸಿಬ್ಬಂದಿಯ ಸಹಾಯದಿಂದ ತಂದು  ಅವರು  ಕಛೇರಿಯ ಬಳಿ ಹಾಕಲು ತಿಳಿಸಿರುತ್ತಾರೆ ಎಂದರೆ ಸರಿ.  ದಿನಾಂಕ

28-05-2019 ರಂದು ಸಂಜೆ 04-50 ಗಂಟೆ ಸಮಯದಲ್ಲಿ ಆರೋಪಿತರು ಕೋಲುಗಳನ್ನು ತುಂಬುತ್ತಿದ್ದರು ಎಂದರೆ ಸರಿ. ನಾನು ಪ್ರಾಣ ರಕ್ಷಣೆಗಾಗಿ ಓಡುತ್ತಿದ್ದಾಗ 2 ರಿಂದ 4 ನೇ ಆರೋಪಿತರು ದೊಣ್ಣೆ ಇಟ್ಟಿಗೆ ಮತ್ತು ಕೋಲುಗಳಿಂದ ನನ್ನನ್ನು ಓಡಿಸಿಕೊಂಡು ಬಂದು ನನ್ನನ್ನು ಹೊಡೆದು ಗಾಯ ಪಡಿಸಿರುತ್ತಾರೆ ಎಂದರೆ ಸರಿ .

ದಿನಾಂಕ 05-09-2019 ರಂದು ಪೋಲೀಸರು ಮಂಡಿಕಲ್ಲು ಗ್ರಾಮದ ಸರ್ವೇ ನಂಬರ್ 32 ರ ಬಳಿ ಬಂದಿದ್ದು ಚಾಸಾ -12 ಮತ್ತು 13 ರವರನ್ನು ಬರ ಸ್ಥಳಕ್ಕೆ ಬರ ಮಾಡಿಕೊಂಡು ಈ ಕೇಸಿನ ಸಾರಾಂಶವನ್ನು ಅವರಿಗೆ ತಿಳಿಸಿ ಮಹಜರ್ ಗೆ ಸಹಕರಿಸುವಂತೆ ಕೋರಿದ್ದು ಅದಕ್ಕೆ ಅವರು ಒಪ್ಪಿದ್ದು ನಾನು ಸ್ಥಳವನ್ನು ತೋರಿಸಿದ ಮೇರೆಗೆ ಪೋಲೀಸರು ಮಹಜರ್ ಕ್ರಮ ಜರುಗಿಸಿ ಸ್ಥಳದಲ್ಲಿ ನಮ್ಮ ಸಹಿಗಳನ್ನು ಪಡೆದರು ಎಂದರೆ ಸರಿ. ಸ್ಥಳದಲ್ಲಿ ನಾನು ಒಂದು ಮಚ್ಚು 4 ದೊಣ್ಣೆ ಗಳು, ಇಟ್ಟಿಗೆ ಚೂರನ್ನು ಹಾಜರುಪಡಿಸಿದ್ದು ಅವುಗಳನ್ನು ಪೋಲೀಸರು ಅಮಾನತ್ತು ಪಡಿಸಿಕೊಂಡರು ಎಂದರೆ ಸರಿ.

ಮುದ್ದೇ ಮಾಲುಗಳಿಲ್ಲದ ಕಾರಣ ಮುಂದುವರೆದ ಮುಖ್ಯ ವಿಚಾರಣೆಗೆ ಮುಂದೂಡಲಾಯಿತು.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಗಣಕೀಕೃತಗೊಳಿಸಲಾಯಿತು)

ಓ.ಹೇ.ಕೇ.ಸ.ಇದೆ.

ಸಿ ಜೆ ಮತ್ತು ಜೆ ಎಂ ಎಫ್ ಸಿ,

ಗುಡಿಬಂಡೆ,

(ಈ ಹಂತದಲ್ಲಿ ಮಾನ್ಯ ಸ.ಸ.ಅ. ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅವಕಾಶವನ್ನು ಕೋರಿರುತ್ತಾರೆ. ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷ್ಯ ಎಂದು ಪರಿಗಣಿಸಿ ಮಾನ್ಯ ಸ.ಸ.ಅ. ರವರಿಗೆ ಪಾಟೀ ಸವಾಲು ಮಾಡಲು ಅನುಮತಿಯನ್ನು ನೀಡಲಾಯಿತು.)

(ಈ ಹಂತದಲ್ಲಿ ಮಾನ್ಯ ಸ.ಸಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅವಕಾಶವನ್ನು ಕೋರಿರುತ್ತಾರೆ. ಸದರಿ ಸಾಕ್ಷಿಯು ತನ್ನ ಹೇಳಿಕೆಗೆ ವ್ಯತಿರಿಕ್ತವಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ, ಆದ್ದರಿಂದ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷ್ಯ ಎಂದು ಪರಿಗಣಿಸಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಗೆ ಪಾಟೀ ಸವಾಲು ಮಾಡಲು ಅನುಮತಿಯನ್ನು ನೀಡಲಾಯಿತು.)

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅವಕಾಶವನ್ನು ಕೋರಿರುತ್ತಾರೆ. ಸದರಿ ಸಾಕ್ಷಿಯು ತನ್ನ ಹೇಳಿಕೆ ಮತ್ತು ಸ್ಥಳ ಪಂಚನಾಮೆಗೆ ವ್ಯತಿರಿಕ್ತವಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ, ಆದ್ದರಿಂದ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷ್ಯ ಎಂದು ಪರಿಗಣಿಸಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಗೆ ಪಾಟೀ ಸವಾಲು ಮಾಡಲು ಅನುಮತಿಯನ್ನು ನೀಡಲಾಯಿತು.)

( ಆರೋಪಿಯು ಈ ದಿನ ನ್ಯಾಯಾಲಯಕ್ಕೆ ಗೈರು ಹಾಜರಾಗಿದ್ದು, ಆರೋಪಿ ಪರ ವಕೀಲರು ಆಸರೋಪಿಯ ಗುರುತಿಸುವಿಕೆಯನ್ನು ಅಲ್ಲಗೆಳೆದಿರುವುದಿಲ್ಲ.)